ನದಿಗಳಿಗೆ ಒರತೆಯನ್ನು ಕೊಡುವ ಬೆಟ್ಟವೂ ಹೌದು. ಆದರೆ ದೇವರು ಮುನಿದು ಈ ಬೆಟ್ಟ ಮತ್ತೆ ಕುಸಿದು ಎರಡು ಊರುಗಳನ್ನು ಕೊಚ್ಚಿಕೊಂಡು ಹೋಗಿದೆ. ಮೊನ್ನೆ ರಾತ್ರಿ ಭಾರೀ ಮಳೆ ಸುರಿಯುತ್ತಿದ್ದಾಗ ನನಗೆ 2019ರ ಘಟನೆಯೇ ಕಣ್ಣ ಮುಂದೆ ಬಂತು. ಅನೇಕರಿಗೆ ಫೋನು ಮಾಡಿ ಸುರಕ್ಷಿತ ಸ್ಥಳಗಳಿಗೆ ತೆರಳಿ ಎಂದು ನಾನು ಹೇಳಿದೆ. 12.30ರ ಸುಮಾರಿಗೆ ಬೆಟ್ಟದ ಹೊಟ್ಟೆಯೊಳಗಿಂದ ಏನೋ ಶಬ್ದ ಬಂದಂತೆ ಭಾಸವಾಯಿತು. ಹೀಗೆಯೇ ಎರಡು ಬಾರಿ ಶಬ್ದ ಬಂದಂತೆ ಅನಿಸಿತು. ಭಾರೀ ಮಳೆಗೆ ಶಬ್ದವನ್ನು ಆಲಿಸುವ ವ್ಯವಧಾನದಲ್ಲಿ ಅಲ್ಲಿದ್ದ ಲೇನ್ ಮನೆಗಳ ನಿವಾಸಿಗಳಾಗಲೀ, ನಗರವಾಸಿಗಳಾಗಲಿ ಇರಲಿಲ್ಲ. ದಿನವಿಡೀ ದುಡಿದು ಮಲಗಿದವರಿಗೆ ನಿದ್ದೆಯ ಆವರಿಸಿತ್ತು. ಆದರೆ ಸುಮಾರು 2 ಗಂಟೆ ರಾತ್ರಿಗೆ ಕೇಳಿಸಿದ ಭಾರೀ ಸದ್ದಿಗೆ ಇಡೀ ಊರೇ ಬೆಚ್ಚಿಬಿದ್ದಿತ್ತು. ಬೆಚ್ಚಿ ಬಿದ್ದಿದ್ದೇವೆ ಎಂದು ಅರಿವಾಗುವ ಮುನ್ನವೇ ಎಷ್ಟೋ ಜೀವಗಳು ಮಣ್ಣಿನಡಿ ಸಮಾಧಿಯಾಗಿದ್ದವು. ಚೂರಲ್‌ಮಲ ಮತ್ತು ಮುಂಡಕ್ಕೈ ಊರುಗಳು ಭೂಸಮಾಧಿಯಾಗಿವೆ. ಸೇತುವೆ, ಶಾಲೆ, ಆಸ್ಪತ್ರೆ, ಜನರು, ಪಶುಪಕ್ಷಿ ಏನೆಂದರೆ ಏನೂ ಉಳಿಯಂತೆ ಬೆಟ್ಟವು ಎಲ್ಲವನ್ನು ತನ್ನ ಹೊಟ್ಟೆಗೆ ಹಾಕಿಕೊಂಡಿದೆ.

ಬೆಟ್ಟವು ಕುಸಿದ ರಭಸಕ್ಕೆ ಇರುವಂಚಿಪುಳ ನದಿಯ ದಡಗಳು ಅಗಲವಾಗಿವೆ. ಬೆಟ್ಟದೊಡನೆ ಧುಮುಕಿ ಬಂದಿರುವ ಭಾರೀ ಮರ, ಕಲ್ಲು ಬಂಡೆಗಳೆಲ್ಲ ನದಿಯ ದಡವನ್ನು ಮೀರಿದೆ. ಪ್ರವಾಹವು ಊರೊಳಗೆ ನುಗ್ಗಿ ಮತ್ತಷ್ಟು ಅಗಲವಾಗಿ ಹರಿಯಲಾರಂಭಿಸಿತು. ಬೆಟ್ಟದ ತುದಿಯಲ್ಲಿ ಜಿಂಕೆಗಳಿವೆ ಎಂದು ನಾವು ಮಾತನಾಡಿಕೊಳ್ಳುತ್ತಿದ್ದೆವು. ಇರುವಂಚಿಪುಳ ನದಿಯಲ್ಲಿ ಸುಮಾರು ಎಂಟು ಕಿಲೋಮೀಟರ್ ದೂರದಲ್ಲಿ ಜಿಂಕೆಯ ಶವ ದೊರೆತಿದೆ ಎಂದರೆ ಕುಸಿತದ ವೇಗ ಎಷ್ಟಿರಬಹುದು ಎಂದು ನೀವೇ ಅಂದಾಜಿಸಿ. ಅಲ್ಲದೆ ಆ ಭಾರೀ ಕಲ್ಲುಬಂಡೆಗಳು, ಮರಗಳು ತಾಸಿನೊಳಗೆ ಅಷ್ಟುದೂರ ಸಾಗಬೇಕಾದರೆ ಪ್ರವಾಹದ ಪ್ರಮಾಣ ಎಷ್ಟಿರಬಹುದು ಎಂದು ಅಂದಾಜಿಸಿ... ಈಗಲೂ ನನ್ನ ಕಿವಿಯಲ್ಲಿ ಬೆಟ್ಟ ಬಾಯಿಬಿಟ್ಟು ಬೊಬ್ಬಿರಿದ ಶಬ್ದವೇ ಕೇಳುತ್ತಿದೆ... ಪ್ರಕೃತಿಯೊಡನೆ ಯುದ್ಧಕ್ಕೆ ನಿಂತು ಸೋತ ಮನುಕುಲವು, ಎಷ್ಟೊಂದು ಜನರನ್ನು ಬಲಿಕೊಟ್ಟುಬಿಟ್ಟಿದೆ ಎಂದು ಬೇಸರವಾಗುತ್ತಿದೆ. ಈಗ ಯಾರೊಡನೆ ಏನು ಮಾತನಾಡುವುದು? ಏನೂ ತೋಚದಾಗಿದೆ...’’

ನೂರುದ್ದೀನ್‌ರ ಅಳಲು ಮತ್ತು ಅಸಹಾಯಕತೆ ಸಾವಿರ ಸಾವಿರ ಮನಸ್ಸುಗಳ ಮೂಕವೇದನೆಯೂ ಹೌದು.

ಪ್ರತಿಕ್ರಿಯಿಸಿ: feedback@sudha.co.in

ಇತಿಹಾಸದ ಅವಘಡಗಳು ಹಾಗೂ ವರ್ತಮಾನದ ವಿದ್ಯಮಾನಗಳನ್ನು ಒಟ್ಟಿಗಿಟ್ಟು ನೋಡಿದರೆ, ವಯನಾಡ್‌ನ ದುರಂತದಲ್ಲಿ ಮನುಷ್ಯನ ಹಸ್ತಕ್ಷೇಪ ಎಷ್ಟರಮಟ್ಟಿಗಿದೆ ಎನ್ನುವುದನ್ನು ಅಂದಾಜು ಮಾಡಬಹುದು.

# ಕೇರಳದ ಭೂಕುಸಿತ ಯಾರ ಪಾಲು ಎಷ್ಟು?

ಸಿ.ಆರ್. ನೀಲಕಂಠನ್


ಕೇರಳದ ವಯನಾಡ್‌ನಲ್ಲಿ ನಡೆದ ಮಹಾಭೂಕುಸಿತದ ಹಿನ್ನೆಲೆ ಕುರಿತು ಎಲ್ಲೆಡೆಯೂ ಚರ್ಚೆ ನಡೆಯುತ್ತಿದೆ. ಆದರೆ, ಪ್ರಾಕೃತಿಕ ದುರಂತ ಕೇರಳಕ್ಕೆ ಹೊಸತೇನೂ ಅಲ್ಲ. ಪಶ್ಚಿಮಘಟ್ಟದ ಸೌಂದರ್ಯದೊಂದಿಗೆ ಕಂಗೊಳಿಸುವ ಕೇರಳದಲ್ಲಿ ಭೂಕುಸಿತ ಕಳೆದ ಹಲವು ವರ್ಷಗಳಿಂದ ಸಾಮಾನ್ಯವೆಂಬಂತೆ ಆಗುತ್ತಲೇ ಇದೆ. ಪ್ರಕೃತಿಯ ವೈಚಿತ್ರ್ಯಗಳಿಗೆ ಮನುಷ್ಯರು ಬಲಿಯಾದಾಗ ಮಾತ್ರ ಭಾರೀ ಸುದ್ದಿಯಾಗುತ್ತದೆ. ವಯನಾಡು ದುರಂತದ ವಿಚಾರವೂ ಹಾಗೆಯೇ.

2018ರ ಜೂನ್ ಮತ್ತು ಆಗಸ್ಟ್ ತಿಂಗಳಲ್ಲಿ ಕೇರಳದಲ್ಲಿ ಪ್ರವಾಹ ಉಂಟಾಗಿ, ಪ್ರವಾಹಪೀಡಿತ ಪ್ರದೇಶದ ಜನ ತಮ್ಮ ನೆಲೆ ಕಳೆದುಕೊಂಡಿದ್ದರು. ನಿರಂತರವಾಗಿ ಸುರಿದ ಕುಂಭದ್ರೋಣ ಮಳೆಯಿಂದಾಗಿ, ರಾಜ್ಯದ 37 ಅಣೆಕಟ್ಟುಗಳಿಂದ ನೀರು ನದಿಗಳಿಗೆ ಬಿಟ್ಟಿದ್ದರ ಪರಿಣಾಮ ಪ್ರವಾಹದ ಮಟ್ಟ ಏರಿಕೆಯಾಯಿತು. ಹತ್ತು ಜಿಲ್ಲೆಗಳಲ್ಲಿ 341 ಭೂಕುಸಿತಗಳಾದ ಬಗ್ಗೆ ವರದಿಗಳು ಪ್ರಕಟಗೊಂಡವು. 54 ಲಕ್ಷ ಜನ ತೊಂದರೆ ಅನುಭವಿಸಿದ್ದರು. 433 ಜನ ಸಾವನ್ನಪ್ಪಿದ್ದರು. ಕೇರಳದ ಬಹುಭಾಗಗಳಲ್ಲಿ ಮೂಲಭೂತ ಸೌಕರ್ಯಗಳ ವ್ಯವಸ್ಥೆ ಅಸ್ತವ್ಯಸ್ತವಾಗಿತ್ತು.

ವಿಪತ್ತಿನ ನಂತರದ ಅಗತ್ಯಗಳ ಮೌಲ್ಯಮಾಪನ (Post Disaster Needs Assessment) ವರದಿಯೊಂದನ್ನು ಕೇರಳ ಸರ್ಕಾರದ ನೇತೃತ್ವದಲ್ಲಿ ವಿಶ್ವಸಂಸ್ಥೆ ನಡೆಸಿತು. ಪರಿಸರ ಸಂವೇದನೆಯಿರುವ, ಆಪತ್ತುಗಳ ಬಗ್ಗೆ ಪೂರ್ವ ಮಾಹಿತಿ ಪಡೆಯುವ ವ್ಯವಸ್ಥೆ ಇರುವ ಭಾರತದ ಮೊತ್ತ ಮೊದಲ ಹಸಿರು ರಾಜ್ಯವನ್ನಾಗಿ ಕೇರಳವನ್ನು ಮಾಡುವ ನಿಟ್ಟಿನಲ್ಲಿ ಈ ವರದಿಯು ಸಲಹೆಗಳನ್ನು ರೂಪಿಸಿ ಮಂಡಿಸಿತ್ತು. ಜಗತ್ತಿನ ವಿವಿಧೆಡೆಗಳಲ್ಲಿ ಸೂಕ್ಷ್ಮ ಪರಿಸರ ಇರುವ ಪ್ರದೇಶಗಳಲ್ಲಿ ನಿರ್ವಹಣೆಯ ಉದಾಹರಣೆಗಳನ್ನು ಉಲ್ಲೇಖಿಸಿ, ಕೇರಳದ ಪುನರ್ ನಿರ್ಮಾಣಕ್ಕಾಗಿ ಸಲಹೆಗಳನ್ನು ನೀಡಲಾಗಿತ್ತು.

ಆದುದೇನು ನೋಡಿ. ವಿಪತ್ತುಗಳು ಸಂಭವಿಸಿದಾಗ ಭಾರೀ ಉತ್ಸಾಹದಿಂದ ಚರ್ಚೆ ನಡೆಸುತ್ತೇವೆ. ಕಾರ್ಯಾಚರಣೆಗಳು ನಡೆಯುತ್ತವೆ. ಅಧ್ಯಯನಗಳು ನಡೆಯುತ್ತವೆ. ವರದಿಗಳು ಪ್ರಕಟವಾಗುತ್ತವೆ. ಕೆಲವು ಸಮಯದ ನಂತರ ಅಧ್ಯಯನದ ವರದಿಗಳನ್ನು ಸರ್ಕಾರಕ್ಕೆ ಸಲ್ಲಿಸಲಾಗುತ್ತದೆ. ಆದರೆ ಅಷ್ಟರಲ್ಲಿ ಸರ್ಕಾರವು ಮತ್ತ್ಯಾವುದೋ ಸಮಸ್ಯೆಗೆ ಆದ್ಯತೆ ನೀಡಿ, ಅದರಲ್ಲಿಯೇ ಮುಳುಗಿಹೋಗಿರುತ್ತದೆ. ಈ ವರದಿಗಳು, ಸಲಹೆಗಳನ್ನು ಕೇಳುವ ವ್ಯವಧಾನವೇ ಸರ್ಕಾರಕ್ಕೆ ಇಲ್ಲವಾಗಿರುತ್ತದೆ. ಮತ್ತೊಂದು ವಿಪತ್ತು ಸಂಭವಿಸಿದಾಗಲೇ, ದೂಳು ತಿನ್ನುತ್ತಿರುವ ವರದಿಗಳ ವಿಚಾರ ಮುನ್ನೆಲೆಗೆ ಬರುವುದು. ಪ್ರಸ್ತುತ, ವಯನಾಡಿನಲ್ಲಿನ ಗುಡ್ಡ ಕುಸಿತವು ಪ್ರಕೃತಿ ಸಹಜವಾಗಿಯೇ ಸಂಭವಿಸಿರಬಹುದು. ಆದರೆ, ಮನುಷ್ಯನ ಹಸ್ತಕ್ಷೇಪವು, ಪ್ರಕೃತಿಯ ಗತಿಗೆ ಮತ್ತಷ್ಟು ವೇಗ ನೀಡಿದ್ದಂತೂ ನಿಜ.

ವಯನಾಡು ದುರಂತದ ಬೆನ್ನಲ್ಲೇ ಪರಿಸರತಜ್ಞ ಡಾ. ಮಾಧವ ಗಾಡ್ಗೀಳ್ ಅವರನ್ನು ಅನೇಕರು ನೆನಪಿಸಿಕೊಳ್ಳುತ್ತಿದ್ದಾರೆ. ಪಶ್ಚಿಮಘಟ್ಟದಲ್ಲಿ ಸೂಕ್ಷ್ಮ ದುರ್ಬಲ ಪರಿಸರವಿದೆ. ಅಲ್ಲಿ ಕೃಷಿ, ವಸತಿ ಅಥವಾ ಭಾರೀ ಯೋಜನೆಗಳನ್ನು ಕೈಗೊಳ್ಳುವುದರಿಂದ ಏನೇನು ಅಪಾಯವಾಗಬಹುದು ಎಂಬುದನ್ನು 2012–13ರಲ್ಲಿಯೇ ಗಾಡ್ಗೀಳ್ ವಿವರಿಸಿದ್ದರು. ಇಡೀ ಪಶ್ಚಿಮಘಟ್ಟವನ್ನು ವಲಯಗಳನ್ನಾಗಿ ವಿಭಾಗಿಸಿ, ಯಾವ ವಲಯದಲ್ಲಿ ಎಷ್ಟರ ಮಟ್ಟಿಗೆ ಮನುಷ್ಯರ ಹಸ್ತಕ್ಷೇಪ ಮಾಡಬಹುದು



ಲೇಖಕರು ಕೇರಳದ ಪರಿಸರ ಹೋರಾಟಗಾರರು ಮತ್ತು ‘ನ್ಯಾಷನಲ್ ಅಲೈಯನ್ಸ್ ಫಾರ್ ಪೀಪಲ್ಸ್ ಮೂವ್‌ಮೆಂಟ್’ನ ಸಂಯೋಜಕರಲ್ಲಿ ಒಬ್ಬರು